**ದಿನಾಂಕಃ 19.06.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಆರ್ ರವರಿಂದಃ**

ನಾನು ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತು. ದಾವಾ ಸ್ವತ್ತು ನನ್ನ ತಂದೆಯ ಆಸ್ತಿ, ಆದ್ದರಿಂದ ದಾವಾ ಸ್ವತ್ತು ನಮಗೆ ಸೇರಬೇಕಾಗದ ಸ್ವತ್ತು ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಈ ದಾವೆಯನ್ನು ಕೆ.ಚೆನ್ನಸಂದ್ರ ಸರ್ವೆ ನಂ.42 ಜಮೀನಿಗೆ ಸಂಬಂಧಿಸಿ ಸಲ್ಲಿಸಿರುತ್ತೇನೆ. ಕೆ.ಚೆನ್ನಸಂದ್ರ ಗ್ರಾಮ ಸರ್ವೆ ನಂ.42 ಎಲ್ಲಾ ವಿಸ್ತೀರ್ಣದ ಜಮೀನು ನನ್ನ ತಂದೆಯಿಂದ ಮಾರಾಟ ಆಗಿದೆ ಎಂದರೆ ಸರಿಯಲ್ಲ. ದಾವಾ ಜಮೀನು ನಮ್ಮ ತಂದೆಯಿಂದ ಮಾರಾಟವಾದ ನಂತರ ದಾವಾ ಜಮೀನಿನ ಖಾತೆ ಬದಲಾವಣೆಗೊಂಡಿರುತ್ತದೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ತಡೆ ಕೋರಿ ನಾನು ಕಂದಾಯ ಉಪವಿಭಾಗಧಿಕಾರಿಯ ನ್ಯಾಯಾಲಯದ ಮುಂದೆ ಒಂದು ಮೇಲ್ಮನವಿ ಸಲ್ಲಿಸಿದೆ ಎಂದರೆ ನನಗೆ ಗೊತ್ತು. ನಿಪಿ-4 ಪ್ರಕರಣದಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿಯಲ್ಲ. ನಿಪಿ-4 ಮೇಲ್ಮನವಿಯನ್ನು ಗುಂಡಮ್ಮ, ಮುನಿಯಮ್ಮ, ಮರಿಯಮ್ಮ ಕೆಂಪಮ್ಮ, ರವರ ಇನ್ನು ಇತರರ ವಿರುದ್ದ ಸಲ್ಲಿಸಿರುತ್ತೇನೆ. ನಿಪಿ-4 ಪ್ರಕರಣದಲ್ಲಿ ಯಾವ ಫಲಿತಾಂಶ ಬಂದಿರುತ್ತದೆ ಎಂದರೆ ಸಾಕ್ಷಿಯು ನಮಗೆ ಮೋಸ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-4 ಪ್ರಕರಣದ ತೀರ್ಪಿನ ವಿರುದ್ಧ ಜಿಲ್ಲಾಧಿಕಾರಿಯ ನ್ಯಾಯಾಲಯದಲ್ಲಿ ನಿಪಿ-6 ರಂತೆ ಒಂದು ಮೇಲ್ಮನವಿ ಸಲ್ಲಿಸಿದೆ ಎಂದರೆ ಸರಿ. ನಿಪಿ-6 ಮೇಲ್ಮನವಿ ಸಹ ವಜಾಗೊಂಡಿರುತ್ತದೆ ಎಂದರೆ ಸರಿ. ನಿಪಿ-6 ಮೇಲ್ಮನವಿಯಲ್ಲಿ ಹೊರ ಬಂದಿರುವ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದೆ ಎಂದರೆ ನನಗೆ ನೆನಪಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

**ಸದರಿ ಪ್ರಕರಣವನ್ನು ನಾನೇ ಘನ ನ್ಯಾಯಾಲಯದಿಂದ ಹಿಂದಕ್ಕೆ ಪಡೆದುಕೊಂಡಿರುತ್ತೇನೆ. ಸರ್ವೆ ನಂ.42 ಜಮೀನ ಪ್ರಸ್ತುತ ಖಾತೆಯು ಆಂಜಿನಮ್ಮ ಎನ್ನುವವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 8 ಆಂಜಿನಮ್ಮ ನನಗೆ ಗೊತ್ತು ಆದ ಕಾರಣ ಅವರನ್ನು ಈ ಪ್ರಕರಣದಲ್ಲಿ ಅವರನ್ನು ಪಕ್ಷಗಾರನಾಗಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದ ಹಕ್ಕು ನಿರ್ಧಾರ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಹೇಳುವಂತೆ ಯಾವುದೇ ಹಕ್ಕು ನಿರ್ಧಾರ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸರ್ವೆ ನಂ.42 ಜಮೀನಿನ ಒಟ್ಟು ವಿಸ್ತೀರ್ಣ 24 ಗುಂಟೆ ಇರುತ್ತದೆ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಆದರೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

**ನನ್ನ ತಂದೆಯ ಹೆಸರು ಪಟೇಲ್ ಆಂಜಿನಪ್ಪ ಅವರಿಗೆ ಇಬ್ಬರು ಹೆಂಡತಿಯರು.**

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**